ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಬ್ಬಿ.

ಉಪಸ್ಥಿತರು

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ. ಎಲ್., ಎಲ್.ಎಲ್.ಬಿ.,
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಗುಬ್ಬಿ.

ಅಸಲು ದಾವಾ ಸಂಖ್ಯೆಃ 66/2026

ದಿನಾಂಕಃ 01ನೇ ಜುಲೈ 2026

ವಾದಿ/ಯರುಃ **ಕರ್ನಾಟಕ ಗ್ರಾಮೀಣ ಬ್ಯಾಂಕ್,**
ಬಳ್ಳಾರಿಯಲ್ಲಿ ನೋಂದಾಯಿತ ಪ್ರಧಾನ ಕಚೇರಿಯನ್ನು
ಹೊಂದಿದ್ದು, ಹೊಸಕೆರೆ ತುಮಕೂರು ಜಿಲ್ಲೆ,
ಗುಬ್ಬಿ ಯಲ್ಲಿ ಅದರ ಶಾಖೆಯನ್ನು
ಅದರ ವ್ಯವಸ್ಥಾಪಕರು
ಪ್ರತಿನಿಧಿಸುತ್ತಾರೆ,

ಪ್ರತಿನಿಧಿಸುವವರುಃ ವ್ಯವಸ್ಥಾಪಕರು,
ಶ್ರೀ ಧರಣೇಶ್ ಬಿ.ಎಸ್. ಬಿನ್ ಸುಬ್ಬೇಗೌಡ,
ಸುಮಾರು 38 ವರ್ಷ,
ಹೊಸಕೆರೆ ಬ್ರಾಂಚ್, ಚೇಳೂರು ಹೋಬಳಿ,
ಗುಬ್ಬಿ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ.ಹೆಚ್.ಎನ್.ಡಿ.,ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ/ಯರುಃ 1. ಬೀರಲಿಂಗಯ್ಯ ಬಿನ್ ಲೇಟ್ ಕೆಂಚಯ್ಯ,
ಸುಮಾರು 82 ವರ್ಷ,

2. ಕೆಂಚಯ್ಯ ಬಿನ್ ಬೀರಲಿಂಗಯ್ಯ,
ಸುಮಾರು 57 ವರ್ಷ,

3. ರಾಜಶೇಖರ್ ಕೆ.ಕೆ. ಬಿನ್ ಕೆಂಚಯ್ಯ,
ಸುಮಾರು 28 ವರ್ಷ,

4. ಪುರುಷೋತ್ತಮ್ ಕೆ.ಕೆ ಬಿನ್ ಕೆಂಚಯ್ಯ,
ಸುಮಾರು 26 ವರ್ಷ,

ಎಲ್ಲರೂ ವಾಸ ಃ ಕುಂಟರಾಮನಹಳ್ಳಿ ಹಾಗಲವಾಡಿ ಹೋಬಳಿ, ತುಮಕೂರು ತಾಲ್ಲೂಕು.

(ವಿಕತರ್ಫಿಯರಾಗಿರುತ್ತಾರೆ)

1.	ದಾವಾ ದಾಖಲಿಸಿದ ದಿನಾಂಕ	20.01.2026		
2.	ದಾವಾ ಸ್ವರೂಪ	ಹಣದ ವಸೂಲಾತಿಗಾಗಿ		
3.	ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ	03.06.2026		
4.	ತೀರ್ಪನ್ನು ಉದ್ಘೋಷಿಸಿದ ದಿನಾಂಕ	01.07.2026		
5.	ತೆಗೆದುಕೊಂಡ ಅವಧಿ	ವರ್ಷ	ತಿಂಗಳು	ದಿನಗಳು
		00	05	12

SAVITHARANI H V
Digitally signed by SAVITHARANI H V
Date: 2026.07.03 15:54:20 +0530

(ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.

-ಃ ತೀರ್ಪು ಃ-

ಸದರಿ ವಾದಿ ಬ್ಯಾಂಕ್ ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಸಾಲದ ವಸೂಲಾತಿಗೆ ಸಲ್ಲಿಸಿದ್ದು, ದಾವೆ ಸಲ್ಲಿಸಿದ ದಿನಾಂಕದಿಂದ ಬಾಕಿ ರೂ. 4,25,947/- ಗಳ ಮೊತ್ತದ ವಸೂಲಾತಿ ಮತ್ತು ಅದರ ಮೇಲೆ ವಾರ್ಷಿಕ ಶೇಕಡಾ 13.50% + 2% ದಂಡದ ಬಡ್ಡಿಯ ದರದಲ್ಲಿ ಭವಿಷ್ಯದ ಬಡ್ಡಿ, ಮತ್ತು ಎಟಿಎಲ್ ಸಾಲಕ್ಕೆ (ATL Loan) ಸಂಬಂಧಿಸಿದಂತೆ ರೂ. 7,72,568/- ಗಳ ಮೊತ್ತದ ವಸೂಲಾತಿ ಮತ್ತು ಅದರ ಮೇಲೆ ಶೇಕಡಾ 14+2% ದಂಡದ ಬಡ್ಡಿಯ ದರದಲ್ಲಿ ಭವಿಷ್ಯದ ಬಡ್ಡಿ ಒಟ್ಟು ರೂ.11,98,515-00 ಸಾಲದ ಹಣವನ್ನು ಕೊಡಿಸಬೇಕೆಂದು ಹಾಗೂ ದಾವಾ ದಿನಾಂಕದಿಂದ ಮೊತ್ತವನ್ನು ವಸೂಲಿ ಮಾಡುವವರೆಗೆ ಪ್ರತಿವಾದಿಯರು ಪಾವತಿಸಲು ಬಾದ್ಯಸ್ಥರಾಗಿರುತ್ತಾರೆಂದು ಆದೇಶಿಸಬೇಕೆಂದು ಹಾಗೂ ಪ್ರತಿವಾದಿಗಳು ನಿಗದಿತ ಅವಧಿಯೊಳಗೆ ಡಿಕ್ರಿ ಮೊತ್ತವನ್ನು ಪಾವತಿಸಲು ವಿಫಲವಾದಲ್ಲಿ ವಾದಿಯು ಸಿ.ಪಿ.ಸಿ. ಯ ಆದೇಶ 34 ರ ಅಡಿಯಲ್ಲಿ ಪರಿಗಣಿಸಿದಂತೆ ಅಂತಿಮ ತೀರ್ಪು ಪ್ರಕ್ರಿಯೆಗಳಿಗೆ ಅರ್ಜಿ ಸಲ್ಲಿಸುವ ಮೂಲಕ ದಾವಾ ಅನೂಸೂಚಿ ಆಸ್ತಿಗಳನ್ನು ಮಾರಾಟ ಮಾಡುವ ಸ್ವಾತಂತ್ರವನ್ನು ನೀಡಲು ಕೋರಿ ಸಲ್ಲಿಸಿರುತ್ತಾರೆ.

2. **<u>ಈ ದಾವೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆಃ-</u>**

1 ಮತ್ತು 2ನೇ ಪ್ರತಿವಾದಿಯರು, ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಕೃಷಿ ಬೆಳೆ ಮಾಡಿಸುವ ಸಲುವಾಗಿ ಸಾಲ ನೀಡಬೇಕೆಂದು ವಾದಿ ಬ್ಯಾಂಕಿಗೆ ಕೋರಿರುತ್ತಾರೆ. ಅದರಂತೆ 1 ಮತ್ತು 2ನೇ ಪ್ರತಿವಾದಿಯರಿಗೆ ದಿನಾಂಕ:23-03-2013 ರಂದು ವಾದಿ ಬ್ಯಾಂಕಿನಿಂದ ರೂ.2,10,000/- ಸಾಲವನ್ನು ಖಾತಾ ಸಂಖ್ಯೆ 85011051144 (12160130000332) ರಲ್ಲಿ ರ ಮುಖಾಂತರ ಪಡೆದು ಅದೇ ದಿವಸ ಪ್ರತಿವಾದಿಗಳು ಸಾಲದ ಒಪ್ಪಂದದ ಕರಾರುಪತ್ರವನ್ನು ಮತ್ತು ಇತರೆ ದಾಖಲಾತಿಗಳನ್ನು ವಾದಿ ಪರ ಬ್ಯಾಂಕಿಗೆ ಬರೆದುಕೊಟ್ಟು ಸದರಿ ಸಾಲವನ್ನು ಐದು ವರ್ಷಗಳ ಅವಧಿಯಲ್ಲಿವಾರ್ಷಿಕ ಶೇಕಡಾ 7% ರಷ್ಟು ಬಡ್ಡಿಯೊಂದಿಗೆ ಮರುಪಾವತಿಸುತ್ತೇವೆಂದು ಬರೆದುಕೊಟ್ಟಿರುತ್ತಾರೆ. ಬಡ್ಡಿ ದರವು ಆರ್.ಬಿ.ಐ (RBI) ನ ನಿರ್ದೇಶನ ತತ್ವಗಳ ಪ್ರಕಾರ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ. ಸದರಿ ಸಾಲದ ಮೊತ್ತಕ್ಕೆ ಹಾಗೂ ಮೀರಿದ ಅವಧಿಯ ಬಾಕಿ ಮೊತ್ತಕ್ಕೆ ಅದು ಮರುಪಾವತಿಯಾಗುವವರೆಗೆ ವಾರ್ಷಿಕ ಶೇಕಡಾ 2% ರಷ್ಟು ದಂಡದ ಬಡ್ಡಿಯನ್ನು ಪಾವತಿಸಲು 1 ಮತ್ತು 2ನೇ ಪ್ರತಿವಾದಿಯರು

ಒಪ್ಪಿದ್ದು, ಪ್ರಸ್ತುತ ಈಗ ಬಡ್ಡಿ ದರವು ವಾರ್ಷಿಕ ಶೇಕಡಾ 13.50% ಆಗಿರುತ್ತದೆ. ಅಂತೆಯೇ ಸದರಿ ಸಾಲದ ಭದ್ರತೆಗಾಗಿ ದಿನಾಂಕಃ 23-03-2013 ಹೈಪೋಥಿಕೇಶನ್ ಒಪ್ಪಂದವನ್ನು ಮಾಡಿಕೊಂಡಿದ್ದಲ್ಲದೆ 1 ಮತ್ತು 2ನೇ ಪ್ರತಿವಾದಿಯರು ತಮ್ಮ ಅಪ್ರಾಪ್ತ ವಯಸ್ಸಿನ ಪುತ್ರರಾದ3 ಮತ್ತು 4ನೇ ಪ್ರತಿವಾದಿಯರ ಪರವಾಗಿ ಸದರಿ ಸಾಲವನ್ನು ಸುರಕ್ಷಿತಗೊಳಿಸಲು ವಾದಿ ಬ್ಯಾಂಕ್ ಪರವಾಗಿ ದಿನಾಂಕ 15-03-2015 ರಂದು ದಾವಾ ಆಸ್ತಿಗಳನ್ನು ಅಡಮಾನ ಇಟ್ಟು ನೋಂದಾಯಿತ ಸರಳ ಅಡಮಾನವನ್ನು ಮಾಡಿಕೊಟ್ಟಿದ್ದಾರೆ.

3. 1 ಮತ್ತು 2ನೇ ಪ್ರತಿವಾದಿಯರು, ಕೃಷಿ ಅವಧಿ ಸಾಲಕ್ಕಾಗಿ (ATL) ಆರ್ಥಿಕ ಸಾಲ ನೀಡಬೇಕೆಂದು ವಾದಿ ಬ್ಯಾಂಕಿಗೆ ಕೋರಿರುತ್ತಾರೆ. ಅದರಂತೆ 1 ಮತ್ತು 2ನೇ ಪ್ರತಿವಾದಿಯರಿಗೆ ದಿನಾಂಕ:01-12-2014 ರಂದು ವಾದಿ ಬ್ಯಾಂಕಿನಿಂದ ರೂ.2,00,000/- ಖಾತಾ ಸಂಖ್ಯೆ 85025546040 (42160326016514) ರ ಮುಖಾಂತರ ಪಡೆದು ಅದೇ ದಿವಸ ಪ್ರತಿವಾದಿಗಳು ಸಾಲದ ಒಪ್ಪಂದದ ಕರಾರುಪತ್ರವನ್ನು ಮತ್ತು ಇತರೆ ದಾಖಲಾತಿಗಳನ್ನು ವಾದಿ ಪರ ಬ್ಯಾಂಕಿಗೆ ಬರೆದುಕೊಟ್ಟು ಸದರಿ

ಸಾಲವನ್ನು ಐದು ವರ್ಷಗಳ ಅವಧಿಯಲ್ಲಿ ವಾರ್ಷಿಕ ಶೇಕಡಾ 14% ರಷ್ಟು ಬಡ್ಡಿಯೊಂದಿಗೆ ಮರುಪಾವತಿಸುತ್ತೇವೆಂದು ಒಪ್ಪಂದ ಮಾಡಿಕೊಂಡಿರುತ್ತಾರೆ. ಬಡ್ಡಿ ದರವು ಆರ್.ಬಿ.ಐ (RBI) ನ ನಿರ್ದೇಶನ ತತ್ವಗಳ ಪ್ರಕಾರ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ. ಸದರಿ ಸಾಲದ ಮೊತ್ತಕ್ಕೆ ಹಾಗೂ ಮೀರಿದ ಅವಧಿಯ ಬಾಕಿ ಮೊತ್ತಕ್ಕೆ ಅದು ಮರುಪಾವತಿಯಾಗುವವರೆಗೆ ವಾರ್ಷಿಕ ಶೇಕಡಾ 2% ರಷ್ಟು ದಂಡದ ಬಡ್ಡಿಯನ್ನು ಪಾವತಿಸಲು 1 ಮತ್ತು 2ನೇ ಪ್ರತಿವಾದಿಯರು ಒಪ್ಪಿಕೊಂಡಿದ್ದಾರೆ. ಅಂತೆಯೇ ಸದರಿ ಸಾಲದ ಭದ್ರತೆಗಾಗಿ ದಿನಾಂಕಃ 01-12-2014 ಹೈಪೋಥಿಕೇಶನ್ ಒಪ್ಪಂದವನ್ನು ಮಾಡಿಕೊಂಡಿದ್ದಲ್ಲದೆ 1 ಮತ್ತು 2ನೇ ಪ್ರತಿವಾದಿಯರು ಸದರಿ ಸಾಲವನ್ನು ಸುರಕ್ಷಿತಗೊಳಿಸಲು ವಾದಿ ಬ್ಯಾಂಕಿನ ದಾವಾ ಅನುಸೂಚಿ ಆಸ್ತಿಗಳನ್ನು ಅಡಮಾನ ಇಟ್ಟು ದಿನಾಂಕ 21-11-2014 ರಂದು ನೋಂದಾಯಿತ ಸರಳ ಅಡಮಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ.

4. ವಾದಿ ಬ್ಯಾಂಕಿನ ಹೆಸರು ಕಾವೇರಿ ಗ್ರಾಮೀಣ ಬ್ಯಾಂಕ್ ಆಗಿತ್ತು ಮತ್ತು ಪ್ರತಿವಾದಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ ಅದು

ವ್ಯವಹಾರ ನಡೆಸುತ್ತಿದ್ದು, ಇತ್ತೀಚೆಗೆ ಭಾರತ ಸರ್ಕಾರವು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾಯ್ದೆಯ ಸೆಕ್ಷನ್ 23(ಎ) ನ ಸಬ್ ಸೆಕ್ಷನ್ 1 ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 22-02-2019 ರ ಅಧಿಸೂಚನೆಯಂತೆ ಸದರಿ ಕಾವೇರಿ ಗ್ರಾಮೀಣ ಬ್ಯಾಂಕ್ ಮತ್ತು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕುಗಳನ್ನು ಕರ್ನಾಟಕ ರಾಜ್ಯದಲ್ಲಿ ಒಂದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಆಗಿ ವಿಲೀನಗೊಳಿಸಿದೆ ಮತ್ತು ದಿನಾಂಕ 01-04-2019 ರಿಂದ ಜಾರಿಗೆ ಬರುವಂತೆ ಈ ಬ್ಯಾಂಕಿನ ಹೆಸರನ್ನು 'ಕರ್ನಾಟಕ ಗ್ರಾಮೀಣ ಬ್ಯಾಂಕ್' ಎಂದು ಕರೆಯಲಾಗುತ್ತದೆ.

5. ವಿಲೀನದ ನಂತರ ಕಾವೇರಿ ಗ್ರಾಮೀಣ ಬ್ಯಾಂಕಿನ ಅಸ್ತಿತ್ವವು ಇರುವುದಿಲ್ಲ ಮತ್ತು ಮೇಲಿನ ದಿನಾಂಕದಿಂದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಂಬ ಹೊಸ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿದೆ. ವಿಲೀನದ ನಂತರ ಹೊಸ ಖಾತೆಯನ್ನು ಸೃಜಿಸಿ, ಸಾಲಗಾರರಿಗೆ ಖಾತೆ ಸಂಖ್ಯೆ 12160130000332 ಮತ್ತು 42160326016514 ಎಂದು ನೀಡಲಾಗಿದೆ ಮತ್ತು ಈ ಖಾತೆಯನ್ನು ಬೀರಲಿಂಗಯ್ಯ ಮತ್ತು ಕೆಂಚಯ್ಯ ಅವರ ಹೆಸರಿನಲ್ಲಿ ತೆರೆಯಲಾಗಿದೆ. ಇತ್ತೀಚೆಗೆ ಭಾರತ ಸರ್ಕಾರವು ದಿನಾಂಕ 07-04-2025 ರ

ಗೆಜೆಟ್ ಅಧಿಸೂಚನೆ ಸಂಖ್ಯೆ CG-DL-E-07042025 ರ ಮೂಲಕ ಸದರಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮತ್ತು ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕುಗಳನ್ನು ಕರ್ನಾಟಕ ರಾಜ್ಯದಲ್ಲಿ ಒಂದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಆಗಿ ವಿಲೀನಗೊಳಿಸಿದೆ ಮತ್ತು ದಿನಾಂಕ 01-05-2025 ರಿಂದ ಜಾರಿಗೆ ಬರುವಂತೆ ಈ ಬ್ಯಾಂಕಿನ ಹೆಸರನ್ನು 'ಕರ್ನಾಟಕ ಗ್ರಾಮೀಣ ಬ್ಯಾಂಕ್' ಎಂದು ಕರೆಯಲಾಗುತ್ತದೆ.

6. ಪ್ರತಿವಾದಿಗಳು ರೂ. 2,10,000/- ಸಾಲವನ್ನು ಮಂಜೂರು ಮಾಡಿಸಿಕೊಂಡು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬರೆದುಕೊಟ್ಟಿದ್ದಾರೆ. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯ ನಿಯಮಾವಳಿಗಳ ಪ್ರಕಾರ, ಮೊದಲ ವರ್ಷದ ಮಿತಿಯಾದ ರೂ. 1,50,000/- ಅನ್ನು ಬಿಡುಗಡೆ ಮಾಡಲಾಗಿತ್ತು. ನಂತರ ಎರಡನೇ ವರ್ಷದ ಮಿತಿಯಾದ ರೂ. 1,65,000/- ಅನ್ನು ನವೀಕರಿಸಲಾಗಿತ್ತು. ಇನ್ನುಳಿದ ಸಾಲದ ಮಿತಿಯನ್ನು ವಾರ್ಷಿಕ ನವೀಕರಣದ ಮೂಲಕ ಪಡೆದುಕೊಳ್ಳಬೇಕಾಗಿತ್ತು. ಆದರೆ, ಪ್ರತಿವಾದಿಗಳು ಒಪ್ಪಿಕೊಂಡಂತೆ ಸಾಲದ ಮೊತ್ತವನ್ನು ಪಾವತಿಸದ ಕಾರಣ

ಮತ್ತು ಖಾತೆಯನ್ನು ನವೀಕರಿಸದ ಕಾರಣ, ಉಳಿದ ಮಿತಿಯ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ.

7. ಸದರಿ ಸಾಲವನ್ನು ವಾರ್ಷಿಕ ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ. ಪ್ರತಿವಾದಿಯರು ಸದರಿ ಸಾಲದ ಮೊತ್ತವನ್ನು ನಿಗಧಿತ ಅವಧಿಯೊಳಗೆ ಮರುಪಾವತಿಸಲು ವಿಫಲರಾಗಿದ್ದಾರೆ ಮತ್ತು ವಾದಿ ಬ್ಯಾಂಕಿಗೆ ಡಿಫಾಲ್ಟರ್ ಆಗಿರುತ್ತಾರೆ. ತದನಂತರ ವಾದಿ ಬ್ಯಾಂಕ್ ಪ್ರತಿವಾದಿಯರಿಗೆ ಹಲವಾರು ಬಾರಿ ಸಾಲ ಮರುಪಾವತಿಸುವಂತೆ ಕೋರಿಕೊಂಡರು ಸಹ ಪ್ರತಿವಾದಿಯರು ಮೇಲೆ ಹೇಳಿದಂತೆ ಸಾಲ ಮತ್ತು ಬಡ್ಡಿಯನ್ನು ಪಾವತಿಸಿರುವುದಿಲ್ಲವಾದ್ದರಿಂದ ಈ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ರೂ.11,98,515/- ಹಣದ ಮರುಪಾವತಿಗಾಗಿ ದಾವೆಯನ್ನು ದಾಖಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ವಾದಿ ಬ್ಯಾಂಕ್ ಪ್ರಾರ್ಥಿಸಿಕೊಂಡಿರುತ್ತಾರೆ.

8. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಜಾರಿಯಾದ ನಂತರ ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ.

9. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ :

1) ಪ್ರತಿವಾದಿಯರಿಂದ ವಾದಿ ಬ್ಯಾಂಕ್ ತಮ್ಮ ವಾದ ಪತ್ರದಲ್ಲಿ ಕೇಳಿರುವಂತೆ ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿ ದರದಲ್ಲಿ ಸಾಲದ ಹಣ ಒಟ್ಟು ರೂ.11,98,515-00 ಗಳನ್ನು ವಸೂಲಾತಿ ಮಾಡಿಕೊಳ್ಳಲು ಅರ್ಹರಾಗಿರುತ್ತಾರೆಯೇ ?

2) ಯಾವ ಆದೇಶ ಅಥವಾ ಡಿಕ್ರಿ ?

10. ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ಸದರಿ ವಾದಿ ಬ್ಯಾಂಕಿನ ಪರವಾಗಿ ಶಾಖಾ ಪ್ರಬಂಧಕರನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಪರವಾಗಿ ನಿ.ಪಿ-1 ರಿಂದ 16 ರವರೆಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ಸಮನ್ಸ್ ಜಾರಿಯಾದ ನಂತರ ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ.

11. ಸದರಿ ಪಿ.ಡಬ್ಲ್ಯೂ -1 ರವರ ಮೌಖಿಕ ಸಾಕ್ಷ್ಯ ಹಾಗೂ ನಿ.ಪಿ-1 ರಿಂದ ನಿ.ಪಿ-16 ರವರೆಗಿನ ದಾಖಲೆಗಳನ್ನು ಪರಿಶೀಲಿಸಿ, ವಾದಿ ಪರ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ-

ಅಂಶ-1 ◌ಃ- ಸಕಾರಾತ್ಮಕವಾಗಿ
ಅಂಶ-2 ◌ಃ- ಅಂತಿಮ ಆದೇಶದಂತೆ ಈ ಕೆಳಕಂಡ,

:: **ಕಾ ರ ಣ ಗ ಳು ::**

12. **ಅಂಶ 1:** ವಾದಿ ಬ್ಯಾಂಕಿನ ವ್ಯವಸ್ಥಾಪಕರನ್ನು ಪಿ.ಡಬ್ಲ್ಯೂ -1 ಎಂದು ವಿಚಾರಣೆಗೆ ಒಳಪಡಿಸಿದ್ದು, ದಾವಾಂಶಗಳನ್ನು ರುಜುವಾತುಪಡಿಸಲು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ತಮ್ಮ ಸಾಕ್ಷ್ಯದಲ್ಲಿ ದಾವಾಂಶಗಳನ್ನು ಪುನರುಚ್ಚರಿಸಿ ತಮ್ಮ ಸಾಕ್ಷ್ಯ ವಿಚಾರಣೆಯ ಸಮರ್ಥನೆಗಾಗಿ, ನಿ.ಪಿ-1 ದಿನಾಂಕ:23.03.2013ರಂದು ಪ್ರತಿವಾದಿಯರು ಬ್ಯಾಂಕಿಗೆ ಸಲ್ಲಿಸಿದ ಕಿಸಾನ್ ಕ್ರೆಡಿಟ್ ಕಾರ್ಡ್ (KCC) ಸಾಲದ ಅರ್ಜಿಯಾಗಿರುತ್ತದೆ. ನಿ.ಪಿ-2 ದಿನಾಂಕ:23.03.2013 ರ ಕರಾರು ನಿಬಂಧನೆ ಪತ್ರವಾಗಿರುತ್ತದೆ. ನಿ.ಪಿ-3 ದಿನಾಂಕಃ 23.03.2013 ರಂದು ಪ್ರತಿವಾದಿಗಳು ವಾದಿ ಬ್ಯಾಂಕಿಗೆ ಬರೆದುಕೊಟ್ಟ ಕರಾರು ಪತ್ರವಾಗಿರುತ್ತದೆ.

ನಿ.ಪಿ-4 ದಿನಾಂಕಃ 15.03.2013 ರಂದು ಪ್ರತಿವಾದಿಗಳು ವಾದಿ ಬ್ಯಾಂಕಿಗೆ ಬರೆದುಕೊಟ್ಟ ನೊಂದಾಯಿತ ಅಡಮಾನ ಪತ್ರವಾಗಿರುತ್ತದೆ. ನಿ.ಪಿ-5 ದಿನಾಂಕ 16-01-2019 ರ ಅಗ್ರಿಮೆಂಟ್ ಟು ರಿಪೇ ಟೈಂ ಬಾಂಡ್ ಪತ್ರವಾಗಿರುತ್ತದೆ. ನಿ.ಪಿ-6 ದಿನಾಂಕ 14-01-2022 ರ ಲೆಟರ್ ಆಫ್ ರಿವೈವಲ್ ಪತ್ರವಾಗಿರುತ್ತದೆ. ನಿ.ಪಿ-7 ದಿನಾಂಕ 01-01-2025 ರ ಲೆಟರ್ ಆಫ್ ರಿವೈವಲ್ ಪತ್ರವಾಗಿರುತ್ತದೆ. ನಿ.ಪಿ-8 ದಿನಾಂಕ 01-01-2025 ರ ಅಕ್ನಾಲೆಡ್ಜ್‌ಮಂಟ್ ಆಫ್ ಸೆಕ್ಯೂರಿಟಿ/ಲಯಾಬಿಲಿಟಿ ಪತ್ರವಾಗಿರುತ್ತದೆ. ನಿ.ಪಿ-9 ಬ್ಯಾಂಕ್ ಸ್ಟೇಟ್ ಮೆಂಟ್ ಆಗಿರುತ್ತದೆ. ನಿ.ಪಿ-10 ದಿನಾಂಕ 01-12-2014 ರ ವ್ಯವಸಾಯ ಅಭಿವೃದ್ಧಿ ಸಾಲದ ಅರ್ಜಿಯಾಗಿರುತ್ತದೆ. ನಿ.ಪಿ-11 ದಿನಾಂಕ 01-12-2014 ರ ಕರಾರು ನಿಬಂಧನೆ ಪತ್ರವಾಗಿರುತ್ತದೆ. ನಿ.ಪಿ-12 ದಿನಾಂಕ 01-12-2014 ರ ಅಡಮಾನ ಪತ್ರದ ಕರಾರು ಪತ್ರವಾಗಿರುತ್ತದೆ. ನಿ.ಪಿ-13 ದಿನಾಂಕ 21-11-2014 ರ ನೋಂದಾಯಿತ ಅಡಮಾನ ಪತ್ರವಾಗಿರುತ್ತದೆ. ನಿ.ಪಿ-14 ಬ್ಯಾಂಕ್ ಸ್ಟೇಟ್ ಮೆಂಟ್ ಆಗಿರುತ್ತದೆ. ನಿ.ಪಿ-15 ದಿನಾಂಕ 19-11-2025 ರ ಕಾನೂನು ತಿಳುವಳಿಕೆ ಪತ್ರವಾಗಿರುತ್ತದೆ. ನಿ.ಪಿ-16 ಅಂಚೆ ರಶೀದಿಯಾಗಿರುತ್ತದೆ.

13. ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿದಾಗ, 1ಮತ್ತು 2ನೇ ಪ್ರತಿವಾದಿಯರು ವಾದಿ ಬ್ಯಾಂಕಿನಿಂದ ದಿನಾಂಕ:23.03.2013, ರೂ.2,10,000/- ಹಾಗೂ ದಿನಾಂಕ:01.12.2014 ರಂದು ರೂ.2,00,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ವಾರ್ಷಿಕ ಶೇ.13.50% ಹಾಗೂ ಶೇ.14.50%+2% ರೂಪಾಯಿಗಳ ಬಡ್ಡಿ ದರದೊಂದಿಗೆ ವಾರ್ಷಿಕ ಕಂತುಗಳ ಮೂಲಕ ಪಾವತಿಸಲು ನಿ.ಪಿ-1 ಮತ್ತು 10 ರಲ್ಲಿ ಒಪ್ಪಿಕೊಂಡು ಸಾಲ ಪಡೆದಿರುವುದು ಕಂಡುಬಂದಿರುತ್ತದೆ. ಇದರ ಪ್ರಕಾರ ಸಾಲ ಮರುಪಾವತಿಸಲು ಇದರಲ್ಲಿರುವ ಷರತ್ತುಗಳಿಗೆ ಒಳಪಟ್ಟು ಸಾಲವನ್ನು ಮರುಪಾವತಿಸುವುದಾಗಿ 1 ಮತ್ತು 2ನೇ ಪ್ರತಿವಾದಿಯರು ಒಪ್ಪಿರುತ್ತಾರೆಂದು ಕಂಡುಬಂದಿರುತ್ತದೆ. ಅಂತೆಯೇ ಸದರಿ ಸಾಲದ ಭದ್ರತೆಗಾಗಿ ನಿ.ಪಿ-4 ಮತ್ತು 13ರಂತೆ ವಾದಿ ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿಸಲು ವಿಫಲರಾದಲ್ಲಿ ಅಂತಿಮ ತೀರ್ಪು ಪ್ರಕ್ರಿಯೆಗಳಿಗೆ ಅರ್ಜಿ ಸಲ್ಲಿಸುವ ಮೂಲಕ ದಾವಾ ಅನೂಸೂಚಿ ಆಸ್ತಿಗಳನ್ನು ಮಾರಾಟ ಮಾಡುವ ಸ್ವಾತಂತ್ರವನ್ನು ನೀಡಿ ದಾವಾ ಸ್ವತ್ತುಗಳನ್ನು ಪ್ರತಿವಾದಿಯರು ವಾದಿ ಬ್ಯಾಂಕಿಗೆ ಅಡಮಾನ ಮಾಡಿರುವುದು

ಕಂಡುಬರುತ್ತದೆ. ನಿ.ಪಿ- 9 ಸಾಲದ ಖಾತೆಯ ನಕಲು ಆಗಿದ್ದು, ಅದನ್ನು ಪರಿಶೀಲಿಸಿದಾಗ ದಿನಾಂಕ: 30.09.2025 ಕ್ಕೆ ರೂ.4,10,755/- ಮತ್ತು ನಿ.ಪಿ- 14 ಸಾಲದ ಖಾತೆಯ ನಕಲು ಆಗಿದ್ದು, ಅದನ್ನು ಪರಿಶೀಲಿಸಿದಾಗ ದಿನಾಂಕ: 23.11.2025 ಕ್ಕೆ ರೂ.7,58,031/- ಸಾಲ ಬಾಕಿ ಇರುವುದು ಕಂಡುಬರುತ್ತದೆ.

14. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ಪಿ.ಡಬ್ಲ್ಯೂ-1 ರವರ ಸಾಕ್ಷ್ಯವನ್ನು ಮತ್ತು ನಿ.ಪಿ-1 ರಿಂದ ನಿ.ಪಿ-16 ರಲ್ಲಿರುವ ಅಂಶಗಳನ್ನು ಸದರಿ ಪ್ರತಿವಾದಿಯರು ಯಾವುದೇ ರೀತಿಯಿಂದ ಪ್ರಶ್ನಿಸದೇ ಇರುವುದರಿಂದ ದಾವಾಂಶಗಳನ್ನು ಪ್ರತಿವಾದಿಯರ ವಿರುದ್ಧ ಪರಿಗಣಿಸಬೇಕಾಗಿರುತ್ತದೆ ಅಲ್ಲದೇ ಪಿ.ಡಬ್ಲ್ಯೂ-1 ರವರ ಸಾಕ್ಷ್ಯವನ್ನು ಹಾಗೂ ನಿ.ಪಿ-1 ರಿಂದ 16 ರಲ್ಲಿರುವ ಅಂಶಗಳನ್ನು ತಿರಸ್ಕರಿಸುವುದು ಸಾಧ್ಯವಿರುವುದಿಲ್ಲ. ಅಲ್ಲದೇ ಸದರಿ ನಿ.ಪಿ-9ನ್ನು ಪರಿಶೀಲಿಸಿದಾಗ ದಿನಾಂಕ:30.09.2025 ಕ್ಕೆ ರೂ.4,10,755/- ಮತ್ತು ನಿ.ಪಿ-14ನ್ನು ಪರಿಶೀಲಿಸಿದಾಗ ದಿನಾಂಕ: 23.11.2025 ಕ್ಕೆ ರೂ.7,58,031/- ಸಾಲ ಬಾಕಿ ಇರುತ್ತದೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಸದರಿ ಅಂಶಗಳನ್ನು

ಪರಿಗಣಿಸಿದಾಗ, ನಿ.ಪಿ-09 ಮತ್ತು 14 ರಲ್ಲಿರುವ ಅಂಶಗಳನ್ನು ತಿರಸ್ಕರಿಸಲು ಯಾವುದೇ ಸಮರ್ಥನೀಯ ಕಾರಣ ಇಲ್ಲದೇ ಇರುವುದರಿಂದ ದಾವೆ ಸಲ್ಲಿಸಿದ ದಿನಾಂಕದಂದು ಸದರಿ ಪ್ರತಿವಾದಿಯರು ಒಟ್ಟು ರೂ.11,98,515/- ಗಳಿಗೆ ಬಾಕಿದಾರರಾಗಿರುತ್ತಾರೆಂದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ.

15. ಅಲ್ಲದೇ ಸದರಿ ಪ್ರತಿವಾದಿಯರು ವಾದಿ ಬ್ಯಾಂಕಿನಿಂದ ದಿನಾಂಕ:23.03.2013, ರೂ.2,10,000/- ಹಾಗೂ ದಿನಾಂಕ:01.12.2014 ರಂದು ರೂ.2,00,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ವಾದಪತ್ರದ ಅಂಶಗಳನ್ನು ಅಲ್ಲಗಳೆಯಲು ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ. ಅಂತೆಯೇ ಸದರಿ ದಾವೆಯನ್ನು ದಿನಾಂಕ:20.01.2026 ರಂದು ಸಲ್ಲಿಸಿದ್ದು, ನಿಗದಿತ ಕಾಲಾವಧಿಯಲ್ಲಿ ಸಲ್ಲಿಸಲಾಗಿರುತ್ತದೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಅಲ್ಲದೇ ದಾವಾ ಸಲ್ಲಿಸಿ ದಾವಾ ಸಮನ್ಸ್ ಜಾರಿಯಾದ ನಂತರ 1 ಮತ್ತು 2ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದೇ, ತಮ್ಮ ಪರವಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸದೆ ಸದರಿ ಪಿ.ಡಬ್ಲ್ಯೂ -1 ರವರನ್ನು ಪಾಟೀ ಸವಾಲು ಮಾಡದೇ ಹಾಗೂ ನಿ.ಪಿ-1

ರಿಂದ 16 ರಲ್ಲಿನ ಅಂಶಗಳನ್ನು ಪ್ರಶ್ನಿಸದೇ ಇರುವುದರಿಂದ ಸದರಿ ಪ್ರತಿವಾದಿಯರು ದಾವಾಂಶಗಳನ್ನು ಮತ್ತು ನಿ.ಪಿ-1 ರಿಂದ 16 ರ ಅಂಶಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತಾರೆಂಬುದು ಹಾಗೂ ನಿಗದಿತ ಸಮಯದಲ್ಲಿ ಸಾಲವನ್ನು ಪಾವತಿಸಲು ವಿಫಲರಾಗಿದ್ದಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಆ ಪ್ರಕಾರವಾಗಿ ಸದರಿ ಪ್ರತಿವಾದಿಯರು ದಾವೆ ಸಲ್ಲಿಸಿದ ದಿನಾಂಕದಂದು ಬಾಕಿ ಇರುವಂತಹ ಒಟ್ಟು ರೂ.11,98,515/- ರೂಪಾಯಿಗಳನ್ನು ವಾದಿ ಬ್ಯಾಂಕಿಗೆ ಮರುಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ.

16. ಅಲ್ಲದೇ ವಾದಿಯು ದಾವೆ ಸಲ್ಲಿಸಿದ ದಿನಾಂಕದಿಂದ ಸದರಿ ಹಣವನ್ನು ಸಂಪೂರ್ಣವಾಗಿ ಪ್ರಸ್ತುತ ಹಾಗೂ ಭವಿಷ್ಯದ ಬಡ್ಡಿದರ ಶೇ.13.50%+2% ಹಾಗೂ ಶೇ.14%+2% ರ ಬಡ್ಡಿಯೊಂದಿಗೆ ಪ್ರತಿವಾದಿಗಳು ಮರುಪಾವತಿಸುವಂತೆ ಆದೇಶಿಸಬೇಕೆಂದು ಕೋರಿರುತ್ತಾರೆ. ಸದರಿ ದಾವಾ ದಿನಾಂಕದಿಂದ ಸದರಿ ಹಣವನ್ನು ಸಂಪೂರ್ಣವಾಗಿ ಮರುಪಾವತಿಸುವರೆಗೆ ವಾರ್ಷಿಕವಾಗಿ ಶೇ.6% ರ ಭವಿಷ್ಯದ ಬಡ್ಡಿಯೊಂದಿಗೆ

ಪ್ರತಿವಾದಿಯರು ಮರುಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಸದರಿ ಅಂಶವನ್ನು ಪರಿಗಣಿಸಿ, 1ನೇ ಅಂಶವನ್ನು ವಾದಿ ಬ್ಯಾಂಕಿನ ಪರವಾಗಿ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. ಅಂಶ-2. ಈ ಮೇಲ್ಕಂಡ 1ನೇ ಅಂಶದಲ್ಲಿ ತಿಳಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

:: ಆದೇಶ ::

ವಾದಿ ಬ್ಯಾಂಕ್ ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.

ಪ್ರತಿವಾದಿಯರು ಒಟ್ಟು ರೂ.11,98,515/- ಗಳನ್ನು ವಾದಿ ಬ್ಯಾಂಕಿಗೆ ಮರುಪಾವತಿಸಲು ಬಾಧ್ಯಸ್ಥರಾಗಿರುತ್ತಾರೆಂದು ಘೋಷಿಸಲಾಗಿದೆ.

ಸದರಿ ದಾವೆ ಸಲ್ಲಿಸಿದ ದಿನಾಂಕದಿಂದ ಬಾಕಿ ಇರುವ ಒಟ್ಟು ಸಾಲದ ಹಣ ರೂ.11,98,515/- ಗಳಿಗೆ ವಾರ್ಷಿಕವಾಗಿ ಶೇ.6 ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿಯನ್ನು ವಾದಿ ಬ್ಯಾಂಕಿಗೆ ನೀಡಲು ಸದರಿ ಪ್ರತಿವಾದಿಯರು ಬಾಧ್ಯಸ್ಥರಾಗಿರುತ್ತಾರೆ.

ಅಂತೆಯೇ, ಪ್ರತಿವಾದಿಗಳಿಗೆ 6 ತಿಂಗಳ ಒಳಗಾಗಿ ಸದರಿ ಡಿಕ್ರಿ ಮೊತ್ತವನ್ನು ಪಾವತಿಸಲು ಸೂಚಿಸಲಾಗಿದೆ. ಪ್ರತಿವಾದಿಗಳು ನಿಗದಿತ ಅವಧಿಯೊಳಗೆ ಡಿಕ್ರಿ ಮೊತ್ತವನ್ನು ಪಾವತಿಸಲು ವಿಫಲವಾದಲ್ಲಿ ವಾದಿಯು ಸಿ.ಪಿ.ಸಿ. ಯ ಆದೇಶ 34 ರ ಅಡಿಯಲ್ಲಿ ಪರಿಗಣಿಸಿದಂತೆ ಅಂತಿಮ ತೀರ್ಪು ಪ್ರಕ್ರಿಯೆಗಳಿಗೆ ಅರ್ಜಿ ಸಲ್ಲಿಸುವ ಮೂಲಕ ದಾವಾ ಅನೂಸೂಚಿ ಆಸ್ತಿಗಳನ್ನು ಮಾರಾಟ ಮಾಡುವ ಸ್ವಾತಂತ್ರವನ್ನು ನೀಡಲು ಕೋರಿ ಸಲ್ಲಿಸಿರುತ್ತಾರೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕಃ 01ನೇ ಜುಲೈ 2026** ರಂದು ಉದ್ಘೋಷಿಸಲಾಯಿತು.)

SAVITHARANI H V
Digitally signed by SAVITHARANI H V
Date: 2026.07.03 15:55:11 +0530

(ಸವಿತರಾಣಿ ಹೆಚ್.ವಿ.)
ಅದಿಕ ಸಿವಿಲ್ ನ್ಯಾಯಾದೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.

ಅನುಬಂಧ

1. ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

ಪಿ.ಡಬ್ಲ್ಯೂ -1 : ಶ್ರೀ ಧರಣೇಶ್ ಬಿ.ಎಸ್.

2. ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

ನಿ.ಪಿ.1 : ಸಾಲದ ಅರ್ಜಿ.

ನಿ.ಪಿ.2	:	ಸಾಲದ ಕರಾರು ಪತ್ರ.
ನಿ.ಪಿ.3	:	ಅಡಮಾನ ಪತ್ರದ ಕರಾರು.
ನಿ.ಪಿ.4	:	ನೋಂದಾಯಿತ ಅಡಮಾನ ಪತ್ರ
ನಿ.ಪಿ.5	:	ಅಗ್ರಿಮೆಂಟ್ ಟು ರೀಪ್ಲೇ ಟೈಂ ಬಾಂಡ್.
ನಿ.ಪಿ.6 ಮತ್ತು 7	:	ಲೆಟರ್ ಆಫ್ ರಿವೈವಲ್‌ಗಳು.
ನಿ.ಪಿ.8	:	ಅಕ್ನಾಲೆಡ್ಜ್ ಮೆಂಟ್ ಆಫ್ ಸೆಕ್ಯೂರಿಟಿ.
ನಿ.ಪಿ.9	:	ಬ್ಯಾಂಕ್ ಸ್ಟೇಟ್ ಮೆಂಟ್.
ನಿ.ಪಿ.10	:	ವ್ಯವಸಾಯ ಅಭಿವೃದ್ಧಿ ಸಾಲದ ಅರ್ಜಿ.
ನಿ.ಪಿ.11	:	ಕರಾರು ನಿಬಂಧನೆ.
ನಿ.ಪಿ.12	:	ಅಡಮಾನ ಪತ್ರದ ಕರಾರು.
ನಿ.ಪಿ.13	:	ನೊಂದಾಯಿತ ಅಡಮಾನ ಪತ್ರ.
ನಿ.ಪಿ.14	:	ಬ್ಯಾಂಕ್ ಸ್ಟೇಟ್ ಮೆಂಟ್.
ನಿ.ಪಿ.15	:	ಕಾನೂನು ತಿಳುವಳಿಕೆ ಪತ್ರ.
ನಿ.ಪಿ.16	:	ಅಂಚೆ ರಸೀದಿ.

3. ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

:- ಇಲ್ಲಃ-

4. ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

-: ಇಲ್ಲಃ-

SAVITHARANI H V

Digitally signed by SAVITHARANI H V
Date: 2026.07.03 15:55:29 +0530

(ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.